

## ಗಾಢ ಲಿಪ್‌ಸ್ಟಿಕ್ ಹಚ್ಚುವ ಮುನ್ನ...

ತುಟಿಗಳಿಗೆ ಗಾಢ ಬಣ್ಣದ ಲಿಪ್‌ಸ್ಟಿಕ್‌ಗಳನ್ನು ಬಳಸುವ ಮುನ್ನ ಕೆಲವು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

- ತುಟಿ ಅಗಲವಾಗಿದ್ದರೆ ಡಾರ್ಕ್ ಲಿಪ್‌ಸ್ಟಿಕ್ ಹೊಂದಿಕೆಯಾಗದೇ ಇರಬಹುದು. ಆದ್ದರಿಂದ ಅಗಲ ತುಟಿಗಳಿಗೆ ಮೊದಲು ಕಪ್ಪು ಲಿಪ್‌ಲೈನರ್‌ನಿಂದ ಕಾಂಟೂರಿಂಗ್ ಮಾಡಿ ಲಿಪ್‌ಸ್ಟಿಕ್ ಹಚ್ಚಿ ಚೆನ್ನಾಗಿ ಬ್ಲೆಂಡ್ ಮಾಡಬೇಕು. ಮ್ಯಾಟ್ ಲಿಪ್‌ಸ್ಟಿಕ್ ಬಳಸುವವರಾದರೆ ಮೊದಲು ತುಟಿಗಳಿಗೆ ಕಂಡೀಷನಿಂಗ್ ಮಾಡಿಕೊಳ್ಳಬೇಕು.
- ಒಡೆದ ತುಟಿಗಳಿಗೆ ಗಾಢ ಲಿಪ್‌ಸ್ಟಿಕ್ ಹಚ್ಚದೇ ಇರುವುದೇ ಒಳ್ಳೆಯದು. ತುಟಿಯ ಚರ್ಮ ಕಿತ್ತು ಬರುವಾಗ ಲಿಪ್‌ಸ್ಟಿಕ್ ಸಹ ಅದರೊಂದಿಗೆ ಬಂದು ಅಂದಗೆಡಿಸುತ್ತದೆ. ಒಡೆದ ತುಟಿಗಳಿಗೆ ಟೂತ್ ಬ್ರಷ್ ಮೇಲೆ ಪೆಟ್ರೋಲಿಯಂ ಜೆಲ್ಲಿ ಸವರಿ ಮಸಾಜ್ ಮಾಡಿ, ಲಿಪ್‌ಸ್ಟಿಕ್ ಹಚ್ಚಿ.
- ಚರ್ಮದ ಬಣ್ಣಕ್ಕೆ ಹೊಂದುವಂತೆ ತುಟಿ ಬಣ್ಣವಿರಲಿ. ಭಾರತೀಯರದ್ದು ಸಾಮಾನ್ಯವಾಗಿ 'ವಾರ್ಮ್ ಸ್ಕಿನ್ ಟೋನ್'. ಇಂತಹ ಚರ್ಮಕ್ಕೆ ಪ್ಲಮ್ ಮತ್ತು ಕಂದು ಬಣ್ಣದ ಶೇಡ್‌ಗಳು ಹೊಂದಿಕೆಯಾಗುತ್ತವೆ. ಡಾರ್ಕ್ ಲಿಪ್‌ಸ್ಟಿಕ್‌ನಲ್ಲಿಯೂ ನ್ಯೂಡ್ ಮತ್ತು ಪೇಸ್ಟಲ್ ಶೇಡ್ಸ್ ಇರುತ್ತವೆ. ಕೆಂಪು ಮತ್ತು ಕಂದು ಬಣ್ಣದ ಶೇಡ್ಸ್ ಸಂಜೆಗೆ ಚೆನ್ನಾಗಿ ಕಂಡರೆ, ಗುಲಾಬಿ ಹಾಗೂ ಬರ್ಗಂಡಿ ಮಧ್ಯಾಹ್ನದ ಮೇಕಪ್‌ಗೆ ಸರಿಹೋಗುತ್ತದೆ.
- ಡಾರ್ಕ್ ಲಿಪ್‌ಸ್ಟಿಕ್ ಜೊತೆ ಮುಖದ ಮೇಕಪ್ ಸರಿದೂಗುವಂತಿರಬೇಕು. ಮುಖಕ್ಕೆ ಮೇಕಪ್ ತಿಳಿಯಾಗಿರಬೇಕು. ಕಣ್ಣುಗಳ ಮೇಕಪ್ ಕೂಡ ಸರಳವಾಗಿರಬೇಕು. ಕಾಂಟೂರಿಂಗ್ ಚೆನ್ನಾಗಿರಬೇಕು.
- ಹೊರ ತುಟಿಗಳಿಗೆ ಗಾಢ ಲಿಪ್‌ಸ್ಟಿಕ್ ಹಚ್ಚಿ, ಪೌಟ್ ಏರಿಯಾದಲ್ಲಿ ಅದೇ ಬಣ್ಣದ ಲೈಟ್ ಶೇಡ್ ಹಚ್ಚಿ. ನಂತರ ಚೆನ್ನಾಗಿ ಬ್ಲೆಂಡ್ ಮಾಡಿದರೆ ಒಳ್ಳೆ ಲುಕ್ ನೀಡುತ್ತದೆ. ಡಾರ್ಕ್ ಮ್ಯಾಟ್ ಶೇಡ್ ಅನ್ನು ತುಟಿಗಳಿಗೆ ಹಚ್ಚಿ ಅದೇ ಬಣ್ಣದ ಗ್ಲಿಟರ್ ಅನ್ನು ಪೌಟ್ ಏರಿಯಾಗೆ ಹಚ್ಚಿ. ಮೇಲ್ತುಟಿಗೆ ಡಾರ್ಕ್ ಶೇಡ್ ಮತ್ತು ಕೆಳತುಟಿಗೆ ಲೈಟ್ ಶೇಡ್ ಹಚ್ಚುವುದು ಕೂಡ ಟ್ರೆಂಡ್‌ನಲ್ಲಿದೆ.



ಸರಿದೂಗಿಸುತ್ತದೆ. ಸಾಮಾನ್ಯವಾಗಿ ಗಾಢ ಕೆಂಪು ಹಾಗೂ ಅದರ ಶೇಡ್‌ಗಳನ್ನು ಯುವತಿಯರು ಹೆಚ್ಚಾಗಿ ಬಳಸುತ್ತಾರೆ. 'ಮೆಟಾಲಿಕ್ ಡಾರ್ಕ್ ಲಿಪ್ಸ್' ಹೊಸ ಲುಕ್ ನೀಡುವ ಬಗೆ ಎನಿಸಿಕೊಂಡಿದೆ. ಲಿಪ್‌ಸ್ಟಿಕ್‌ಗೆ ಮೆಟಾಲಿಕ್ ಶೇಡ್ ನೀಡುವ ಈ ಶೈಲಿ ಶ್ರೀಮಂತ ನೋಟ ನೀಡುತ್ತದೆ. ಪ್ಲಮ್, ಅಂದರೆ ಗಾಢ ನೇರಳೆ ಬಣ್ಣದ ಲಿಪ್‌ಸ್ಟಿಕ್‌ಗಳು ಚಾಲ್ತಿಯಲ್ಲಿದ್ದು, ಸರಳ ಉಡುಪು ತೊಟ್ಟರೂ ಗಮನಸೆಳೆಯುವಂತೆ ಮಾಡುತ್ತವೆ.

ಈ ಡಾರ್ಕ್ ಶೇಡ್ ಲಿಪ್‌ಸ್ಟಿಕ್‌ಗಳಲ್ಲಿ, ಹೆಚ್ಚು ಗ್ಲಾಸಿ ಹಾಗೂ ಮಿಂಚು ಬಳಸಿ ಲೇಪಿಸಿಕೊಳ್ಳುವ 'ಗ್ಲೇಜ್ಡ್ ಡೋನಟ್ ಲಿಪ್ಸ್', ಕಡು ಕೆಂಬಣ್ಣದ 'ಡೀಪ್ ಮೆರ್ಲಾಟ್' ಲಿಪ್‌ಸ್ಟಿಕ್ ಯುವತಿಯರ ಸೌಂದರ್ಯ ಇಮ್ಮಡಿಗೊಳಿಸಬಲ್ಲದು ಎಂಬುದು ಸೌಂದರ್ಯ ಮೀಮಾಂಸಕರ ಅಭಿಪ್ರಾಯ.

ಹೊಳೆಯುವ 'ಲ್ಯಾಟೆಕ್ಸ್ ಗ್ಲಾಸ್' ಚಳಿಗಾಲಕ್ಕೆ ಅತ್ಯುತ್ತಮ ಮೇಕಪ್ ಎನಿಸಿಕೊಂಡಿದೆ. ಮ್ಯಾಟ್ ಲಿಪ್‌ಸ್ಟಿಕ್ ಮೇಲೆ ಲಿಪ್ ಗ್ಲಾಸ್ ಪದರ ಸುಂದರವಾಗಿ ಕಾಣಿಸುತ್ತದೆ. ಮತ್ತೊಂದು ವಿಧ 'ಡಿಸಾಡೆಂಟ್ ರೆಡ್', ತುಟಿಗಳಿಗೆ ಬೋಲ್ಡ್ ಲುಕ್ ನೀಡಬಲ್ಲ ಕೆಂಪು ಬಣ್ಣದ ಲಿಪ್‌ಸ್ಟಿಕ್ ಅನ್ನೇ ಎರಡು ಪದರ ಲೇಪಿಸಿಕೊಳ್ಳುವುದು. 'ಫ್ರಾಸ್ಟೆಡ್ ಬೆರ್ರಿ' ಬಣ್ಣಗಳು ಈ ಗಾಢತೆಗೆ ಇನ್ನಷ್ಟು ಮೆರುಗು ತುಂಬಬಲ್ಲವು.

ಕೆಲವು ವರ್ಷಗಳಿಂದ ಮ್ಯಾಟ್ ಲಿಪ್‌ಸ್ಟಿಕ್ ಹೆಚ್ಚಾಗಿ ಬಳಕೆಯಲ್ಲಿದೆ. ಈ ಚಳಿಗಾಲಕ್ಕೆ ಹಿತವೆನಿಸುವ, ಗಾಢವಲ್ಲದಿದ್ದರೂ ಮೃದುವಾಗಿರುವ 'ಸಾಫ್ಟ್ ಫೋಕಸ್ ಮ್ಯಾಟ್ ಲಿಪ್‌ಸ್ಟಿಕ್' ಮತ್ತೊಂದು ಫ್ಯಾಷನ್ ಸ್ಟೇಟ್‌ಮೆಂಟ್‌ನಂತೆ ಕಾಣುತ್ತದೆ. ಬಿರಿದ ತುಟಿಗಳಿಗೆ ಜೀವ ತುಂಬುವ 'ಕ್ರಿಮ್ಸಂ ಲಿಪ್‌ಸ್ಟಿಕ್' ಕೂಡ ಹೊಸತೇ ನೋಟ ನೀಡಬಲ್ಲದು. ಮುಖಕ್ಕೆ ಮೇಕಪ್ ಇರಲಿ, ಇಲ್ಲದಿರಲಿ, ಕಚೇರಿಗಾಗಲೀ, ಪಾರ್ಟಿಗಾಗಲೀ ಈ ತುಟಿ ಬಣ್ಣ ಎಲ್ಲಕ್ಕೂ ಹೊಂದುವಂಥದ್ದು.

ಇವುಗಳೊಂದಿಗೆ ಇನ್ನಷ್ಟು ಬಣ್ಣಗಳು ಟ್ರೆಂಡ್‌ನಲ್ಲಿವೆ. ಬ್ಲಾಕ್ ಕರೆಂಟ್, ಬರ್ಗಂಡಿ, ಬ್ಲಡ್ ರೆಡ್, ರಸ್ಟ್, ಮರೂನ್ ರೆಡ್, ಬ್ಲಾಕ್ ಚೆರಿ, ಕ್ರಿಮ್ಸಂ ಮತ್ತು ಪಿಂಕ್ ಕಟಿಂಗ್ ಏಜ್ ಮುಂತಾದ ಶೇಡ್‌ಗಳು ಗ್ಲಾಮರಸ್ ಲುಕ್ ನೀಡುತ್ತವೆ. ಕ್ಯಾಂಡಿ ರೆಡ್, ಡಾರ್ಕ್ ಕೊರಾಲ್, ಗೋಥಿಕ್ ಬ್ರೌನ್, ಮರಿಲ್ ಮಲ್ಬರಿ, ರಾಯ್ಸ್ ರೆಡ್, ಬೆರ್ರಿ ಬ್ರೌನ್, ಬ್ರಿಕ್ ರೆಡ್, ಡಾರ್ಕ್ ಚಾಕೊಲೇಟ್, ಡೀಪ್ ಬ್ರೌನ್ ಹಲವು ಶೇಡ್‌ಗಳು ತುಟಿಯ ರಂಗನ್ನು ಹೆಚ್ಚಿಸುತ್ತವೆ.

ಏನಾದರೂ ಕುಡಿಯುವಾಗ, ತಿನ್ನುವಾಗ, ಮಾತನಾಡುವಾಗ ಈ ಗಾಢ ಬಣ್ಣಗಳು ಅಂಟಿಕೊಂಡು ವಿಚಿತ್ರವಾಗಿ ಕಾಣದಂತೆ ತಡೆಯಲು ಅಂಟುರಹಿತ (Transfer free) ಲಿಪ್‌ಸ್ಟಿಕ್‌ಗಳೂ ದೊರೆಯುತ್ತವೆ. ಇದರೊಂದಿಗೆ ತುಟಿಗಳು ತೇವವಾದಾಗ, ನೀರು ಬಿದ್ದಾಗ ಬಣ್ಣ ಅಳಿಸದಂತೆ ಇರುವ ವಾಟರ್‌ಪ್ರೂಫ್ ಲಿಪ್‌ಸ್ಟಿಕ್‌ಗಳೂ ಈಗ ಲಭ್ಯ. ಹೊಸ ಟ್ರೆಂಡ್ 'ಕಿಸ್ ಪ್ರೂಫ್ ಲಿಪ್‌ಸ್ಟಿಕ್'ಗಳು ಫ್ಯಾಷನ್ ಜಗತ್ತಿನಲ್ಲಿ ಸಂಚಲನ ಮೂಡಿಸಿವೆ.

### 2022ರ ಟ್ರೆಂಡಿ ಬಣ್ಣ 'ಕಪ್ಪು'

ಉಡುಪುಗಳಲ್ಲಿ ಕಪ್ಪು ಬಣ್ಣಕ್ಕೆ ವಿಶೇಷ ಮೆರುಗು ಇರುವಂತೆ ಲಿಪ್‌ಸ್ಟಿಕ್‌ನಲ್ಲೂ ಕಪ್ಪು ಬಣ್ಣದ್ದೇ ವ್ಯಾಖ್ಯಾನವಿದೆ. ತುಟಿಗಳ ಬಣ್ಣದ ವಿಷಯದಲ್ಲಿ ಇದನ್ನು ಆತ್ಮವಿಶ್ವಾಸ, ಶಕ್ತಿ, ದೃಢತೆ ಪ್ರತಿನಿಧಿಸುವ ಬಣ್ಣ ಎಂದೇ ತಿಳಿಯಲಾಗಿದೆ. ಕಪ್ಪು ಬಣ್ಣದ ಲಿಪ್‌ಸ್ಟಿಕ್ 2022ರ ಟ್ರೆಂಡ್ ಎಂದು ಕರೆಸಿಕೊಂಡಿದೆ. ಕಪ್ಪು ಬಣ್ಣದ ಹಲವು ಶೇಡ್‌ಗಳು, ಲಿಕ್ವಿಡ್ ಲಿಪ್‌ಸ್ಟಿಕ್‌ಗಳು ಮೆಚ್ಚುಗೆ ಪಡೆದುಕೊಂಡಿವೆ. ಮ್ಯಾಟ್, ಗ್ಲಾಸಿ ಅಥವಾ ಜ್ಯುವೆಲ್ ಲಿಪ್‌ಸ್ಟಿಕ್, ಯಾವುದೇ ಶೈಲಿಗಾದರೂ ಈ ಕಪ್ಪು ಬಣ್ಣ ಮೋಡಿ ಮಾಡುವಂತೆ ಕಾಣುತ್ತದೆ. ■